| 6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ. | |
|---|---|
| ಸಿ.ಸಿ. ನಂ. | **24721-2016** |
| ಸಾಕ್ಷಿಯ ಹೆಸರು | ಜನಾರ್ದಾನ ಚಾರಿ |
| ತಂದೆ ಹೆಸರು | ಲೇಟ್ ರಂಗಾಚಾರಿ |
| ವಯಸ್ಸು | 63 ವರ್ಷ |
| ಉದ್ಯೋಗ | ನಿವೃತ್ತ ಎಎಸ್ಐ |
| ವಾಸ ಸ್ಥಳ | ಬೆಂಗಳೂರು |

ಸಾಕ್ಷಿಯನ್ನು ದಿನಾಂಕ **20-12-2023** ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ : ಮಾನ್ಯ ಹಿರಿಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ :

ನಾನು 2011 ರಿಂದ 2017 ರವರೆಗೆ ನಾನು ಎಸ್ ಜಿ ಪಾಳ್ಯ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

13.07.2015 ರಂದು ನಾನು ಠಾಣೆಯಲ್ಲಿ ಎಸ್ ಹೆಚ್ ಒ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಬಿಜು ಸೈಮನ್ ರವರಿಂದ ದೂರನ್ನು ಪಡೆದು ಠಾಣೆ ಸಂಖ್ಯೆ 653/2015 ರಲ್ಲಿ ಪ್ರ.ವ.ವನ್ನು ದಾಖಲು ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾದಿಕಾರಿಗಳಿಗೆ ಕಳುಹಿಸಿರುತ್ತೇನೆ. ಈಗ ತೋರಿಸುವ ದೂರಿನ ಮೇಲೆ ನನ್ನ ಸಹಿ ಇದೆ. ದೂರು ನಿಪಿ-1, ಸಾಕ್ಷಿಯ ಸಹಿ ನಿಪಿ-1 ಎ, ಈಗ ತೋರಿಸುವ ಪ್ರವವ ನ್ನು ನಿಪಿ-2, ಸಾಕ್ಷಿಯ ಸಹಿ ನಿಪಿ-2 ಎ ಇರುತ್ತದೆ. ಮುಂದಿನ ತನಿಖೆಗಾಗಿ ಕೇಸಿನ ಕಡತವನ್ನು ಚಾಸಾ-6 ರವರಿಗೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ :**

ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ದೂರನ್ನು ಸ್ವೀಕರಿಸಿದ್ದೀರಾ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು. ನಿಮ್ಮ ಮೇಲಾದಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಪ್ರವವನ್ನು ದಾಖಲು ಮಾಡಿದ್ದೀರಾ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು.

**ಮರುವಿಚಾರಣೆಃ ಇಲ್ಲ.**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸ. ಇ. ಎ. ಒ.

6 ನೇ ಅ ಮು ಮ ದಂ ನ್ಯಾ